**ದಿನಾಂಕ 12.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಅರ್ಜಿದಾರರ ಪರ: ಶ್ರೀ. ಬಿ.ಆರ್. ವಕೀಲರಿಂದಃ-</u>**

1 ನೇ ಅರ್ಜಿದಾರರು ನನ್ನ ಹೆಂಡತಿ ಎಂದರೆ ಸರಿ. 2 ನೇ ಅರ್ಜಿದಾರರು ನನ್ನ ಮಗ ಎಂದರೆ ಸರಿ. 2 ಮತ್ತು 3 ನೇ ಎದುರುದಾರರು ನನ್ನ ತಂದೆ-ತಾಯಿ. 4 ನೇ ಎದುರುದಾರರು ನನ್ನ ಅಣ್ಣ ಎಂದರೆ ಸರಿ. ನಾನು ಮತ್ತು 1 ನೇ ಅರ್ಜಿದಾರರು ಪ್ರೇಮ ವಿವಾಹ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ದಿನಾಂಕ 29.04.2016 ರಂದು ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್ ನಲ್ಲಿರುವ ಗಣಪತಿ ದೇವಸ್ಥಾನದಲ್ಲಿ ನಮ್ಮ ವಿವಾಹ ಆಗಿರುತ್ತದೆ. ನಮ್ಮ ವಿವಾಹದ ಸಮಯದಲ್ಲಿ ನಾನು, 1 ನೇ ಅರ್ಜಿದಾರರು ಮತ್ತು ಮೂರು ಜನ ಸ್ನೇಹಿತರು ಇದ್ದೆವು.

2016 ರಲ್ಲಿ ವಿವಾಹದ ಸಮಯದಲ್ಲಿ ನಾನು ಕಾರು ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಲ್ಯಾಬ್ ಟೆಕ್ನಿಷಿಯನ್ ಕೋರ್ಸ್ ಅನ್ನು 2020 ರಲ್ಲಿ ಮುಗಿಸಿರುತ್ತೇನೆ. ನಮ್ಮ ವಿವಾಹದ ಸಮಯದಲ್ಲಿ 1 ನೇ ಅರ್ಜಿದಾರರು ವಿದ್ಯಾಭ್ಯಾಸ ಮಾಡುತ್ತಿದ್ದರು. 2016 ರಲ್ಲಿ ನಮ್ಮ ವಿವಾಹವಾದ ದಿನ ನಾನು ಬೆಂಗಳೂರಿನಲ್ಲಿಯೇ ವಾಸವಾಗಿದ್ದೆನು. ವಿವಾಹವಾದ ದಿನದಂದು 1 ನೇ ಅರ್ಜಿದಾರರು ಅವರ ತಂದೆ-ತಾಯಿಗೂ ಹೇಳದಂತೆ ಬೆಂಗಳೂರಿಗೆ ನನ್ನೊಂದಿಗೆ ವಿವಾಹವಾಗಲು ಸ್ವಇಚ್ಛೆಯಿಂದ ನನ್ನನ್ನು ನಂಬಿ ಬಂದಿದ್ದರು ಎಂದರೆ ಸರಿ.

1 ನೇ ಅರ್ಜಿದಾರರ ತವರು ಮನೆ ಕಾಮನಕೆರೆ ಗ್ರಾಮ ಎಂದರೆ ಸರಿ. ನನ್ನ ಸ್ವಂತ ಊರು ಕಾಮನಕೆರೆ ಗ್ರಾಮದ ಪಕ್ಕದಲ್ಲಿರುವ ಮರುಳನಹಳ್ಳಿ ಗ್ರಾಮ ಎಂದರೆ ಸರಿ. ವಿವಾಹವಾದ ಮರುದಿನ 1 ನೇ ಅರ್ಜಿದಾರರು ನನಗೆ ವಿವಾಹವನ್ನು ನೊಂದಣಿ ಮಾಡಿಸಿಕೊಳ್ಳಲು ಒತ್ತಾಯಿಸಿದ್ದರೂ ಸಹ ನಾನೇ ಅದನ್ನು ಉದ್ದೇಶಪೂರ್ವಕವಾಗಿ ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಅರ್ಜಿದಾರರು ಅವರ ತಂದೆ-ತಾಯಿಯನ್ನು ಹೇಳದೆ-ಕೇಳದೆ ಬಿಟ್ಟು ಬಂದಿದ್ದರಿಂದ 1 ನೇ ಅರ್ಜಿದಾರರ ತಂದೆ ಬೀರೂರು ಪೊಲೀಸ್ ಠಾಣೆಗೆ ದೂರನ್ನು

ನೀಡಿದ್ದರು ಎಂದರೆ ಸರಿ. ಸದರಿ ದೂರಿನಲ್ಲಿ 1 ನೇ ಅರ್ಜಿದಾರರ ತಂದೆಯು ಮರುಳನಹಳ್ಳಿ ಗ್ರಾಮದ ಸಂದೀಪನೊಂದಿಗೆ ನನ್ನ ಮಗಳು ವಿವಾಹ ಮಾಡಿಕೊಂಡಿರುವ ವಿಚಾರ ನನಗೆ ತಿಳಿದಿರುತ್ತದೆ. ಸದರಿ ವಿಚಾರವಾಗಿ ನನ್ನ ಮಗಳಿಗೆ ಬಂದೋಬಸ್ತ್ ಮಾಡಿಕೊಡಿ ಎಂದೂ ಸಹ ದೂರಿನಲ್ಲಿ ಕೋರಿಕೊಂಡಿದ್ದರು ಎಂದರೆ, ಸಾಕ್ಷಿಯು ಮೊದಲು ಕಾಣೆಯಾಗಿರುತ್ತಾಳೆ ಎಂದು ದೂರನ್ನು ನೀಡಿದ್ದು, ನಮ್ಮ ವಿವಾಹದ ವಿಚಾರ ತಿಳಿದ ನಂತರ ಬಂದೋಬಸ್ತ್ ಮಾಡಿಕೊಡಿ ಎಂದು ನಂತರ ಕೋರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಅರ್ಜಿದಾರರ ತಂದೆಯು ಬೀರೂರು ಪೊಲೀಸ್ ಠಾಣೆಗೆ ದೂರನ್ನು ನೀಡುವಾಗ ನಾನು 1 ನೇ ಅರ್ಜಿದಾರರನ್ನು ಈಗಾಗಲೇ ಮದುವೆಯಾಗಿದ್ದು, ಮುಂದೆ ಆಕೆಯನ್ನು ನಾನು ಬಿಟ್ಟು ಹೋಗಬಹುದೆಂಬ ಉದ್ದೇಶದಿಂದ ಸದರಿ ದೂರಿನಲ್ಲಿ 1 ನೇ ಅರ್ಜಿದಾರರ ತಂದೆ ನನ್ನಿಂದ ಬಂದೋಬಸ್ತ್ ಮಾಡಿಕೊಡಿ ಎಂದು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ.

ನಮ್ಮ ವಿವಾಹವಾದ ನಂತರ 1 ನೇ ಅರ್ಜಿದಾರರ ತಂದೆ-ತಾಯಿ 1 ನೇ ಅರ್ಜಿದಾರರಿಗು ಮತ್ತು ನನಗು ಆರತಕ್ಷತೆ ಸಮಾರಂಭವನ್ನು ನೆರವೇರಿಸಿದ್ದರು ಎಂದರೆ ಸರಿ. ಆರತಕ್ಷತೆಯು ನಮ್ಮ ವಿವಾಹವಾದ 15 ದಿನಗಳ ನಂತರ ಮಾಡಿರುತ್ತಾರೆ. ದಿನಾಂಕ 29.04.2016 ರಂದು 1 ನೇ ಅರ್ಜಿದಾರರ ತಂದೆಯು ಬೀರೂರು ಪೊಲೀಸ್ ಠಾಣೆಗೆ ಬಂದೋಬಸ್ಸ್ ಮಾಡಿಕೊಡಿ ಎಂದು ದೂರು ನೀಡಿದ್ದನ್ನು ಹೊರತುಪಡಿಸಿ ನನ್ನ ವಿರುದ್ಧ ಬೇರೆ ಯಾವುದೇ ದೂರನ್ನು 1 ನೇ ಅರ್ಜಿದಾರರ ತಂದೆ-ತಾಯಿ ನೀಡಿರುವುದಿಲ್ಲ ಎಂದರೆ ಸರಿ.

ನಾನು ಹಾಜರುಪಡಿಸಿರುವ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ನನ್ನ ವಕೀಲರಿಗೆ ನಾನೇ ಖುದ್ದು ಮಾಹಿತಿ ನೀಡಿ ಬರೆಸಿರುತ್ತೇನೆ. ನಮ್ಮ ವಿವಾಹವು ದೇವಸ್ಥಾನದಲ್ಲಿ ಆದ ದಿನದಂದು ಬೇರೆ ಯಾವುದೇ ಅಹಿತಕರ ಘಟನೆಗಳು ಆ ಸ್ಥಳದಲ್ಲಿ ನಡೆದಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ವಿವಾಹದ ದಿನದಂದು ಅಹಿತಕರ ಘಟನೆ ನಡೆದಿರುತ್ತದೆ ಎಂದು ನಮೂದಿಸಿದ್ದು, ಯಾವ ಅಹಿತಕರ ಘಟನೆ ನಡೆದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ವಿವಾಹದ ದಿನದಂದು 1 ನೇ ಅರ್ಜಿದಾರರ ತಂದೆಯು ನನಗೆ ಫೋನ್ ಕರೆ ಮಾಡಿ ನನ್ನ ಮಗಳನ್ನು ಕರೆದುಕೊಂಡು ಬಂದು ಬಿಡದಿದ್ದರೆ ನಿನ್ನ ವಿರುದ್ಧ ಅಪಹರಣದ ಪ್ರಕರಣವನ್ನು ದಾಖಲಿಸುವುದಾಗಿ ಹೆದರಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ

ಇರುವುದಿಲ್ಲ. 1 ನೇ ಅರ್ಜಿದಾರರ ತಂದೆಯು ನನಗೆ ಯಾವುದೇ ರೀತಿಯ ಬೆದರಿಕೆಯನ್ನು ಹಾಕಿರುವುದಿಲ್ಲ ಮತ್ತು ಆ ರೀತಿ ದೂರನ್ನು ನೀಡಿರುವುದಿಲ್ಲ, ಹೀಗಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮತ್ತು 1 ನೇ ಅರ್ಜಿದಾರರ ಆರತಕ್ಷತೆಯ ಸಮಯದಲ್ಲಿ 1 ನೇ ಅರ್ಜಿದಾರರ ತಂದೆ-ತಾಯಿ ನನಗೆ ಚಿನ್ನದ ಕೊರಳ ಚೈನು, ಬ್ರಾಸ್ಲೇಟ್ ಮತ್ತು ಉಂಗುರವನ್ನು ನೀಡಿದ್ದು, 1 ನೇ ಅರ್ಜಿದಾರರಿಗೆ 100 ಗ್ರಾಂನ ಮಾಂಗಲ್ಯ ಸರ, ಮತ್ತೊಂದು ಸರ ಮತ್ತು ಓಲೆಯನ್ನು ನೀಡಿದ್ದರು ಎಂದರೆ ಸರಿಯಲ್ಲ. ವಿವಾಹವಾದ ದಿನದಂದು ಆರತಕ್ಷತೆಯಾಗುವ ದಿನದವರೆಗು ನಮ್ಮ ಮನೆಗೂ ಮತ್ತು 1 ನೇ ಅರ್ಜಿದಾರರ ಮನೆಗೂ ಹೋಗಿ ಬಂದು ಮಾಡಿರುತ್ತೇವೆ. 1 ನೇ ಅರ್ಜಿದಾರರ ಮನೆಗೆ ವಿವಾಹವಾದ ನಂತರ ಯಾವ ದಿನ ಹೋಗಿರುತ್ತೇನೆ ಮತ್ತು ನಮ್ಮ ಊರಿನ ಮನೆಗೆ ಯಾವ ದಿನದಂದು ಹೋಗಿರುತ್ತೇನೆ ಎಂದು ನನಗೆ ಈಗ ಮರೆತು ಹೋಗಿರುತ್ತದೆ.

1 ನೇ ಅರ್ಜಿದಾರರು ಮತ್ತು ನಾನು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಾನು ಸಾದು ಲಿಂಗಾಯತ ಜನಾಂಗಕ್ಕೆ ಸೇರಿದವನು. 1 ನೇ ಅರ್ಜಿದಾರರು ನೊಳಂಬ ಲಿಂಗಾಯತ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನನ್ನ ಮತ್ತು 1 ನೇ ಅರ್ಜಿದಾರರ ಜನಾಂಗದಲ್ಲಿ ಒಂದೇ ಮತ, ಆಚರ-ವಿಚಾರಗಳನ್ನು ಒಂದೇ ರೀತಿಯಾಗಿ ನೆರವೇರಿಸಿಕೊಂಡು ಹೋಗುತ್ತೇವೆ ಎಂದರೆ ಸರಿ. ಅದೇ ರೀತಿ ನಮ್ಮಿಬ್ಬರ ಜನಾಂಗದಲ್ಲಿಯೂ ಆಹಾರ ಸಂಪ್ರದಾಯ ಎಲ್ಲವೂ ಒಂದೇ ರೀತಿಯಾಗಿರುತ್ತದೆ ಎಂದರೆ ಸರಿ. ನಾನು ಮತ್ತು 1 ನೇ ಅರ್ಜಿದಾರರು ಪ್ರೀತಿಸುವ ಸಮಯದಲ್ಲಿಯೇ ನಾನು ಸಾದು ಲಿಂಗಾಯತ ಜನಾಂಗಕ್ಕೆ ಸೇರಿದವನು, ಆಕೆ ನೊಳಂಬ ಲಿಂಗಾಯತ ಜನಾಂಗಕ್ಕೆ ಸೇರಿವಳು ಎಂದು ನಮ್ಮಿಬ್ಬರಿಗೆ ಗೊತ್ತಿತ್ತು ಎಂದರೆ ಸರಿ,.

ನಾನು 2016 ರಲ್ಲಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಹಾಗೂ Trainee Lab Technician ಆಗಿಯೂ ಸಹ ಕೆಲಸ ನಿರ್ವಹಿಸುತ್ತಿದ್ದೆ. ಯಾವುದೇ ಆಸ್ಪತ್ರೆಗಳಲ್ಲಿ ತರಬೇತಿ ಪೂರ್ಣಗೊಳಿಸಿದ ನಂತರ ಮಾತ್ರ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ, ಆದರೆ ಕೆಲಸಕ್ಕೆ ಸೇರಿಸಿಕೊಂಡು ತರಬೇಡಿ ನೀಡುವುದಿಲ್ಲ ಎಂದರೆ ಸರಿಯಲ್ಲ. 2020 ರಲ್ಲಿ ನನ್ನ ಕೋರ್ಸ್ ಮುಗಿದ 02 ವರ್ಷಗಳ ನಂತರ ಲ್ಯಾಬ್ ಟೆಕ್ನಿಷಿಯನ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ.

ಟ್ರೂ ಮೆಡಿಸಿನ್ ಲ್ಯಾಬ್ ನಲ್ಲಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ಟ್ರೂ ಮೆಡಿಸಿನ್ ಲ್ಯಾಬ್ ನಲ್ಲಿ ಕೆಲಸದಿಂದ ತೆಗೆದು ಹಾಕಿದ ಬಗ್ಗೆ ನಾನು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ನಮ್ಮ ವಿವಾಹವಾದ ನಂತರ ನಾವು ಬೆಂಗಳೂರಿನ ಆರ್.ಟಿ.ನಗರದಲ್ಲಿ ಬಾಡಿಗೆ ಮನೆ ಮಾಡಿ ಸಂಸಾರ ಮಾಡಿಕೊಂಡಿದ್ದೆವು. ನಾನು ಬಾಡಿಗೆ ಮನೆಗೆ ರೂ.7,000/- ಬಾಡಿಗೆ ಪಾವತಿ ಮಾಡುತ್ತಿದ್ದೆ. ಎಷ್ಟು ಮುಂಗಡ ಹಣವನ್ನು ಬಾಡಿಗೆ ಮನೆಗೆ ಪಾವತಿಸಿದ್ದೆ ಎಂದು ನನಗೆ ಈಗ ಮರೆತು ಹೋಗಿರುತ್ತದೆ. ನಾವು ಬೆಂಗಳೂರಿನಲ್ಲಿ ಇದ್ದಾಗ ಸುಮಾರು ರೂ.10,000/- ಖರ್ಚು ಬರುತ್ತಿತ್ತು.

ನಮ್ಮ ಮರುಳನಹಳ್ಳಿ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಒಟ್ಟು 4 ಎಕರೆ ಜಮೀನು ಇರುತ್ತದೆ. ಅದರಲ್ಲಿ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಈಗ ಹೇಳಲಾಗುವುದಿಲ್ಲ. ನಾನು ಬೆಂಗಳೂರಿನಲ್ಲಿ ಇದ್ದಾಗ ನನ್ನ ತಂದೆ-ತಾಯಿ ನಾನು ಬೇಕು ಎಂದಾಗ ನನಗೆ ಹಣವನ್ನು ಕಳುಹಿಸಿಕೊಡುತ್ತಿದ್ದರು. ನನಗೆ ಹಣ ಕಳುಹಿಸುವಷ್ಟು ಆದಾಯ ಮರುಳನಹಳ್ಳಿ ಗ್ರಾಮದ ನಮ್ಮ ಜಮೀನಿನಲ್ಲಿ ಇರುತ್ತದೆ ಎಂದರೆ, ಸಾಕ್ಷಿಯು ನನ್ನ ತಂದೆ-ತಾಯಿ ನಂತರ ಅನಾರೋಗ್ಯ ಸಮಸ್ಯೆಯಿಂದಾಗ ಅವರ ಖರ್ಚನ್ನು ಅವರೇ ನೋಡಿಕೊಳ್ಳುತ್ತಿದ್ದರು ನನಗೆ ನೀಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ-ತಾಯಿ ಸುಮಾರು 04 ತಿಂಗಳ ಕಾಲ ಹಣವನ್ನು ಕಳುಹಿಸಿಕೊಟ್ಟಿರುತ್ತಾರೆ, ನಂತರ ಕಳುಹಿಸಿಕೊಟ್ಟಿರುವುದಿಲ್ಲ. ನಾನು ಮತ್ತು 1ನೇ ಅರ್ಜಿದಾರರು ಬೆಂಗಳೂರಿನಲ್ಲಿ ಇದ್ದಾಗ 1ನೇ ಅರ್ಜಿದಾರರ ತಂದೆಯು ನಾವು ಇದ್ದ ಬಾಡಿಗೆ ಮನೆಗೆ ಮುಂಗಡ ಹಣ ಮತ್ತು ಬಾಡಿಗೆ ಹಣವನ್ನು ಪಾವತಿಸಿದ್ದು ಮತ್ತು ಮನೆಗೆ ಸಂಬಂಧಿಸಿದ್ದ ಸಾಮಾನುಗಳನ್ನು ತೆಗೆದುಕೊಟ್ಟಿದ್ದರು ಎಂದರೆ, ಸಾಕ್ಷಿಯು ಫ್ರಿಡ್ಜ್ ಮತ್ತು ಟಿವಿ.ಯನ್ನು ತೆಗೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ.

1ನೇ ಅರ್ಜಿದಾರರು ನನ್ನೊಂದಿಗೆ ಸುಮಾರು 01 ವರೆ ವರ್ಷಗಳ ಕಾಲ ಸಾಂಸಾರಿಕ ಜೀವನ ನಡೆಸಿರುತ್ತಾರೆ. ಕಡೂರಿನ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಜೀವನಾಂಶವನ್ನು ಕೋರಿ 1ನೇ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು 1ನೇ ಅರ್ಜಿದಾರರೊಂದಿಗೆ ಈ ಹಿಂದೆಯೂ ಸಂಸಾರ ಮಾಡಿಕೊಂಡಿದ್ದು, ಮುಂದೆಯೂ 1ನೇ ಅರ್ಜಿದಾರರನ್ನು ಚೆನ್ನಾಗಿ ನೋಡಿಕೊಂಡು

ಸಂಸಾರ ಮಾಡಿಕೊಂಡು ಹೋಗುವುದಾಗಿ ಮೆಮೋವನ್ನು ಸಲ್ಲಿಸಿ ಸದರಿ ಪ್ರಕರಣವನ್ನು ಹಿಂಪಡೆದು 1 ನೇ ಅರ್ಜಿದಾರರನ್ನು ಕರೆದುಕೊಂಡು ಹೋಗಿರುತ್ತೇನೆ ಎಂದರೆ, ಸಾಕ್ಷಿಯು ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ 05 ವರ್ಷಗಳಿಂದ ದೂರವಿದ್ದು ನಂತರ 1 ನೇ ಅರ್ಜಿದಾರರು ಬಂದ ನಂತರ ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಅರ್ಜಿದಾರರಿಗೆ ಸದರಿ ಪ್ರಕರಣದಲ್ಲಿ ನಾನೇ ಒತ್ತಾಯ ಮಾಡಿ ಸದರಿ ಪ್ರಕರಣವನ್ನು ಮುಕ್ತಾಯ ಮಾಡಿಸಿ ಕರೆದುಕೊಂಡು ಹೋಗಿರುತ್ತೇನೆ ಎಂದರೆ, ಸಾಕ್ಷಿಯು ನಾನು ಪ್ರೀತಿಯಿಂದ ಹಾಗೆ ಹೇಳಿ ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

ಈ ಮಧ್ಯೆ ನಾನು ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾಂಪತ್ಯ ಹಕ್ಕುಗಳ ಪುನರ್ ಪ್ರಾಪ್ತಿಗಾಗಿ ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾವು 05 ವರ್ಷಗಳಿಂದ ದೂರವಿರುವುದಾಗಿ ತಿಳಿಸಿರುವುದಿಲ್ಲ ಎಂದರೆ, ಸಾಕ್ಷಿಯು ನನಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣವನ್ನು ನಾನು 1 ನೇ ಅರ್ಜಿದಾರರಿಗೆ ನೋಟೀಸು ಜಾರಿಯಾಗುವ ಪೂರ್ವದಲ್ಲಿಯೇ ನಾನು ಹಿಂಪಡೆದುಕೊಂಡಿರುತ್ತೇನೆ ಎಂದರೆ, ಸಾಕ್ಷಿಯು ನನಗೆ ನ್ಯಾಯಾಲಯಕ್ಕೆ ತಿರುಗಲು ಹಾಗೂ ವಕೀಲರಿಗೆ ಫೀ ಕೊಡಲು ಸಾಧ್ಯವಾಗದೇ ಇದ್ದುದ್ದರಿಂದ ಅದನ್ನು ಹಿಂಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಂಶಗಳನ್ನು ನನ್ನ ಮೆಮೋದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಮ್ಮ ವಿವಾಹವಾದ 01 ವರೆ ವರ್ಷದ ನಂತರ 2 ನೇ ಅರ್ಜಿದಾರರು ಜನಿಸಿರುತ್ತಾರೆ. ನಮ್ಮ ವಿವಾಹವಾದ 01 ವರೆ ವರ್ಷದಲ್ಲಿ ನಾನು ಎರಡು ಮನೆ ಬದಲಾಯಿಸಿರುತ್ತೇನೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.